# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಸಾರ್ವಜನಿಕ/ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕ್ ದಂಡಿನಶಿವಿರ ಹೋಬಳಿ ಅಮ್ಮಸಂದ್ರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಮಲ್ಲಿಕಾರ್ಜುನ ಆರಾಧ್ಯ (ಪ್ರಸ್ತುತ ನಿವೃತ್ತ) ರವರು ಕರ್ತವ್ಯಲೋಪ/ದುರ್ವರ್ತನೆ ಎಸಗಿರುವ ಬಗ್ಗೆ-ಆದೇಶ.

**ಓದಲಾಗಿದೆ:**
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-4237/2014/ಎಆರ್‌ಎಲ್‌ಒ-1. ದಿನಾಂಕ: 21-04-2017.
2. ಮಾನ್ಯ ಉಪಲೋಕಾಯಕ್ತ-2 ರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ-4237/2014/ಎಆರ್‌ಎಲ್‌ಒ-1, ದಿನಾಂಕ: 18-03-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು, ದಿನಾಂಕ: 18-03-2017 ರ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ. ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕ್ ದಂಡಿನಶೀವಿರ ಗ್ರಾಮ ಮತ್ತು ಅಂಚೆಯ ನಿವಾಸಿಯಾದ ಶ್ರೀ ಎಸ್.ಎಸ್.ನಿತ್ಯಾನಂದ ಬಿನ್ ಲೇ.ನಾಗರಾಜು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕ್ ದಂಡಿನಶಿವಿರ ಹೋಬಳಿ ಅಮ್ಮಸಂದ್ರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಮಲ್ಲಿಕಾರ್ಜುನ ಆರಾಧ್ಯ (ಪ್ರಸ್ತುತ ನಿವೃತ್ತ) (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದೇವೆ.

**ದೂರಿನ ಸಂಕ್ಷೀಪ್ತ ವಿವರಣೆ:**

ದೂರುದಾರರ ತಂದೆಯವರು ದಿ:20-05-1967 ರಲ್ಲಿ ಅವಿಭಕ್ತ ಕುಟುಂಬದಲ್ಲಿ ಪಾಲುದಾರಿಕೆಯಂತೆ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದು, ಅವರ ಮರಣಾನಂತರ ದೂರುದಾರರ ತಂದೆಯ ಹೆಸರಿನಲ್ಲಿದ್ದ ಅಮ್ಮಸಂದ್ರ ಗ್ರಾಮದ ಸರ್ವೆ ನಂ.19/4 ರಲ್ಲಿದ್ದ ಹೆಂಚಿನ ಮನೆಯಲ್ಲಿ ದಕ್ಷಿಣದ ಕಡೆಯ ಅರ್ಧ ಭಾಗ ಪೂರ್ವ-ಪಶ್ಚಿಮ 28*20 ಅಡಿಯ ಹೆಂಚಿನ ಮನೆಯನ್ನು ಉತ್ತರ ಭಾಗದ ಅರ್ಧ ಭಾಗದ ಮನೆಯನ್ನು ಇದರ ಮುಂಭಾಗದಲ್ಲಿರುವ ಕೊಟ್ಟಿಗೆ ಮನೆಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಡಬೇಕೆಂದು ಕೋರಿ ಅರ್ಜಿಯನ್ನು ದಿ:25-06-2013 ರಂದು ಸಲ್ಲಿಸಿದ್ದು, ದಿ:08-07-2013 ರಂದು ಸದಥಳ ಮಹಜರ್ ಬರುವುದಾಗಿ ಎದುರುದಾರರು ನೋಟಿಸ್ ಕಳುಹಿಸಿದ್ದು, ಅಳತೆ ಮಾಡಲು ಬಂದಾಗ ದೂರುದಾರರ ದೊಡ್ಡಪ್ಪ ಶ್ರೀ ಎಸ್. ಮುನಿರಾಮಯ್ಯ ರವರಿಗೆ ದಾಖಲಾತಿಗಳನ್ನು ಕೇಳಲಾಗಿ, ಅವರು ಯಾವುದೇ ದಾಖಲೆ ಇಲ್ಲವೆಂದು ಹೇಳಿದ್ದರಿಂದ, ಅಳತೆಯನ್ನು ಮಾಡಲು ಮುಂದೂಡಿ, ಒಂದು ವರ್ಷದ ನಂತರ ಎದುರುದಾರರು ಮತ್ತು ಅಮ್ಮಸಂದ್ರ ಗ್ರಾಮ ಪಂಚಾಯತ್‌ನ ಸದಸ್ಯರು ಬಂದು ಅಳತೆ ಮಾಡಿಕೊಂಡು ಹೋಗಿದ್ದಾರೆ. ಅನಂತರ, ಶ್ರೀ ಮುನಿರಾಮಯ್ಯನವರು ಖಾತೆ ಮಾಡಬಾರದೆಂದು ತಕರಾರು ನೀಡಿದ್ದಾರೆ. ದೂರುದಾರರು ಮಾಹಿತಿ ಹಕ್ಕಿನಡಿಯಲ್ಲಿ ದಾಖಲೆಗಳನ್ನು ಕೊಡುವಂತೆ ಕೋರಿದಾಗ, ಕೇಳಿರುವ ದಾಖಲೆಗಳು ಇಲ್ಲವೆಂದು ಮತ್ತು ದೂರುದಾರರ ತಾಯಿಯ ಹೆಸರಿಗೆ ಖಾತೆ ಮಾಡಲು ಬರುವುದಿಲ್ಲವೆಂದು ಹೇಳಿದ್ದಾರೆ. ಆದರೆ, ಮೂಲ ದಾಖಲೆಗಳು ಇಲ್ಲದಿದ್ದರೂ ಸಹ ದೂರುದರರ ದೊಡ್ಡಪ್ಪ ಶ್ರೀ ಮುನಿರಾಮಯ್ಯನವರಿಗೆ ಖಾತೆ ಮಾಡಿಕೊಟ್ಟಿದ್ದು, ದೂರುದಾರರಿಗೆ ಅನ್ಯಾಯ ಮಾಡಿರುವುದಾಗಿ ಹೇಳಿದ್ದಾರೆ.

**ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-**

ದೂರುದಾರರ ತಂದೆ ಶ್ರೀ ನಾಗರಾಜು ರವರು ದಿ:20-02-2013 ರಂದು ಮರಣ ಹೊಂದಿದ್ದು, ಅವರು ದಿ:20-05-1962 ರಲ್ಲಿ ತಮ್ಮ ಅವಿಭಕ್ತ ಕುಟುಂಬದ ಆಸ್ತಿಯನ್ನು ಪಾಲುದಾರಿಕೆಯಲ್ಲಿ ವಿಭಾಗ ಮಾಡಿಕೊಂಡು ಮತ್ತು ಅವರ ಹೆಸರಿನಲ್ಲಿದ್ದ ಮೇಲ್ಕಂಡ ಸರ್ವೇ ನಂ.19/4 ರ ಹೆಂಚಿನ ಮನೆಯಲ್ಲಿ 2 ಭಾಗ ದಕ್ಷಿಣದ ಕಡೆ ಪೂರ್ವ-ಪಶ್ಚಿಮ 28*20 ಅಡಿಯುಳ್ಳ ಹೆಂಚಿನ ಮನೆ ಮತ್ತು ಉತ್ತರಕ್ಕೆ 2 ಭಾಗದ ಮನೆಯನ್ನು ಮತ್ತು ಕಾಲು ಭಾಗದ

ಕೊಟ್ಟಿಗೆ ಮನೆಯನ್ನು ದೂರುದಾರರ ತಾಯಿಯ ಹೆಸರಿನಲ್ಲಿ ಖಾತೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದು ದೂರುದಾರರ ತಂದೆಯ ಮರಣ ಸಮರ್ಥನ ಪತ್ರದ, ವಂಶವೃಕ್ಷ ದಿ:20-05-1962 ರ ಪಂಚಾಯತಿ ಪಾರಕತ್ತಿನ ಆಧಾರದ ಮೇಲೆ ಸದರಿ ಶ್ರೀಮತಿ ಶಾಂತಮ್ಮನ ಹೆಸರಿಗೆ ಪೌತಿ ಖಾತೆ ಮಾಡಿಕೊಟ್ಟಿದೆ, ಆದರೆ ಸದರಿ ಪಾಲುದಾರಿಕೆಯಲ್ಲಿ ಎಷ್ಟು ಅಡಿ ಉದ್ದ್? ಎಷ್ಟು ಅಡಿ ಅಗಲ? ಎಂದು ನಮೂದಿಸಿಲ್ಲ. ತಾವು ಸ್ಥಳ ಪರಿಶೀಲನೆಗೆ ನೋಟಿಸ್‌ನ್ನು ನೀಡಿದ್ದರೂ ಸಹ ದೂರುದಾರರು ಸಹಕರಿಸಿಲ್ಲ. ದೂರುದಾರರು ಖಾತೆ ಮಾಡಿ ಎಂದು ಕೇಳುತ್ತೀರುವ ಜಾಗವು ಸರ್ವೆ ನಂ.19/47 ಆಗಿದೆ. ಸರ್ವೆ ನಂ.ನಲ್ಲಿರುವ ಮನೆಯನ್ನಾಗಲಿ ಅಥವಾ ಖಾಲಿ ಜಾಗವನ್ನಾಗಲಿ ಪಂಚಾಯತ್‌ನಲ್ಲಿ ಖಾತೆ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಸರ್ವೆ ನಂ.19/4 ರಲ್ಲಿ ಕಟ್ಟಿರುವ ಮನೆಯು ತಮ್ಮ ಡಿಮ್ಯಾಂಡ್ ವಹಿಯಲ್ಲಿ ದೂರುದಾರರ ತಂದೆಯ ಹೆಸರಿನಲ್ಲಾಗಲಿ ಅಥವಾ ಅವರ ಅಜ್ಜ ಶ್ರೀ ಮರಿಬಸವೇಗೌಡರ ಹೆಸರಿನಲ್ಲಾಗಲಿ ನಮೂದಾಗಿಲ್ಲ. ಡಿಮ್ಯಾಂಡ್ ವಹಿಯಲ್ಲಿ ದಾಖಲಿಸಿದ್ದರೆ ಮಾತ್ರ ಪೌತಿ ವಾರಸುದಾರರಿಗೆ ಖಾತೆ ಬದಲಾವಣೆ ಮಾಡಲು ಅವಕಾಶವಿದೆ. ಈಗಿನ ಸರ್ಕಾರದ ಸುತ್ತೋಲೆ ಸಂ:ಗ್ರಾಅಪ 809 ಗ್ರಾಪಂಅ 2014, ದಿ:21-11-2014 ರತ ಪ್ರಕಾರ ಪಂಚಾಯತ್ ವ್ಯಾಪ್ತಿಯ ಆಸ್ತಿಗಳಿಗೆ ನಮೂನೆ-9, 11ಎ ಮತ್ತು 11ಬಿ ಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಡಿಜಿಟಲ್ ಸಹಿಯ ಮೂಲಕ ವಿತರಿಸಲು ತಿಳಿಸಿದೆ. "ಯಾವುದೇ ಸ್ವತ್ತು ತಮ್ಮ ಗ್ರಾಮ ಪಂಚಾಯತ್‌ನ ಗ್ರಾಮನ ಠಾಣಾ ವ್ಯಾಪ್ತಿಯಲ್ಲಿದ್ದರೆ ಹಾಗೂ ಖಾತೆ ಬದಲಾವಣೆಗೆ ಕೋರಿದ ಅರ್ಜಿದಾರರ ವಂಶಸ್ಥರ ಹೆಸರು ಪಂಚಾಯತ್ ಡಿಮ್ಯಾಂಡ್ ವಹಿಯಲ್ಲಿ ದಾಖಲೆಯಿದ್ದರೆ ಮಾತ್ರ ಪೌತಿವಾರಸು ಖಾತೆ ಬದಲಾಣೆಗೆ ಅವಕಾಶವಿದೆ". ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಹೊರಡಿಸಿದ ಸರ್ಕಾರದ ಸುತ್ತೋಲೆ ಸಂ:ಗ್ರಾಪಂಅಸ 553 ಗ್ರಾಪಂಅ 2012, ದಿ:04-01-2013 ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಭೂ ಪರಿವರ್ತನೆ ಆದೇಶ ಇಲ್ಲದರ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಈಗಲು ಸಹ ದೂರುದಾರರು ತಮ್ಮ ಪಾಲುದಾರಿಕೆ ಮತ್ತು ಅಳತೆಯ ದಾಖಲೆ ಅಥವಾ ಕ್ರಯಪತ್ರ ಕೊಟ್ಟರೆ ಖಾತೆ ಮಾಡುವುದಾಗಿ ಹೇಳಿದ್ದಾರೆ.

**ಎದುರುದಾರರ ಆಕ್ಷೇಪಣೆಗೆ ದುರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ-**

ದೂರುದಾರರ ದೊಡ್ಡಪ್ಪ ಶ್ರೀ ಮುನಿರಾಮಯ್ಯನವರು ಯಾವುದೇ ದಾಖಲೆಗಳನ್ನು ಕೊಡದೇ ಇದ್ದರೂ ಸಹ ಅವರ ಹೆಸರಿಗೆ ಡಿಮ್ಯಾಂಡ್ ಪುಸ್ತಕದಲ್ಲಿ ಖಾತೆ 101 ಎಂದು ನಮೂದಿಸಿದ್ದಾರೆ. ಅದರೆ, ತಮ್ಮ ಹಿಸ್ಸೆಯ ಉತ್ತರ ಭಾಗಕ್ಕೆ ಯಾವುದೇ ದಾಖಲೆ ಇರುವುದಿಲ್ಲವಾದ್ದರಿಂದ, ಖಾತೆ ಮಾಡಲು ಬರುವುದಿಲ್ಲವೆಂದು ಹಿಂಬರಹವನ್ನು ನೀಡಿದ್ದಾರೆ. ಈ ಬಗ್ಗೆ ಅವರ ಖಾತೆ ನಂ.101 ರ ಪ್ಯಾನ್ ಮತ್ತು ಪರವಾನಗಿಯನ್ನು ಕೇಳಲಾಗಿ, ಅವು ಕಛೇರಿಯಲ್ಲಿ ಲಭ್ಯವಿಲ್ಲವೆಂದು ಹಾರಿಕೆಯ ಉತ್ತರ ನೀಡಿದ್ದಾರೆ. ಎದುರುದಾರರು ದಿ:21-08-2013 ರಿಂದ ದಿ:09-09-2014 ರವರೆಗೆ ತಮಗೆ ಯಾವುದೇ ನೋಟಿಸ್‌ನ್ನು ನೀಡದೆ ತಮ್ಮ ಹೆಸರಿನಲ್ಲಿ ಖಾತೆ ಮಾಡಲು ಮೂಲ ದಾಖಲಾತಿ ಇಲ್ಲವೆಂದು ಹಿಂಬರಹ ಕೊಟ್ಟಿದ್ದಾರೆ. ತಮಗೆ ನೋಟಿಸ್ ನೀಡದೇ ನೋಟಿಸ್‌ಗೆ ಸಹಕರಿಸಿಲ್ಲವೆಂದು ಆಕ್ಷೇಪಣೆಯಲ್ಲಿ ಹೇಳಿದ್ದಾರೆ. ತಾವು ಖಾತೆ ಮಾಡಲು ಕೊಟ್ಟಿರುವ ಜಾಗದ ಸರ್ವೆ ನಂ.19/4 ಆಗಿದ್ದು, ಎದುರುದಾರರು ನೀಡಿರುವ ಮಾಹಿತಿ ಪ್ರಕಾರ ದಿ:20-02-2015 ರ ಸಾಮಾನ್ಯ ಸಭೆಯ ಪ್ರತಿಯನ್ನು ಲಗತ್ತಿಸಿದ್ದು, ಅದರಲ್ಲಿ ಅಧ್ಯಕ್ಷರ ಸಹಿ ಮತ್ತು ಸೀಲ್ ಇಲ್ಲ. ಗ್ರಾಮ ಪಂಚಾಯತ ನಿಂದ ದಿ:08-01-2011 ರಂದು ನೋಟಿಸ್ ನೀಡಿ 1 ವರ್ಷದ 11 ದಿನಗಳ ನಂತರ ತಮಗೆ ಏನೂ ತಿಳಿಸದೇ ಖಾತೆಯನ್ನು ಮಾಡದೇ ತಮ್ಮ ದೊಡ್ಡಪ್ಪ ಶ್ರೀ ಮುನಿರಾಮಯ್ಯನವರವರಿಂದ ದಿ:19-07-2014 ರಂದು ತಕರಾರನ್ನು ಸ್ವೀಕರಿಸಿ ಅವರ ಜೊತೆಗೆ ಷಾಮಿಲಾಗಿ ತಮ್ಮ ಮನೆ ಖಾತೆ ಮಾಡಿಕೊಂಡು ತೊಂದರೆ ಕೊಡುತ್ತಿದ್ದಾರೆ. ಸದರಿ ಶ್ರೀ ಮುನಿರಾಮಯ್ಯನವರು ತಮ್ಮ ಹಿಂದಿನ ಮನೆ 5*20 ಅಡಿ ಉದ್ದ್‌ದ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದು, ಅದನ್ನು ತಮ್ಮ ದೊಡ್ಡಪ್ಪ ಶ್ರೀ ಮುನಿರಾಮಯ್ಯನವರಿಗೆ ಮಾರಿಯೆಂದು ಎದುರುದಾರರು ಹೇಳಿದ್ದು, ತಾವು ಅದಕ್ಕೆ ಒಪ್ಪದೇ ಇದ್ದರಿಂದ ತಮಗೆ ತೊಂದರೆ ಕೊಟ್ಟಿದ್ದು, ಆದ್ದರಿಂದ ತಮ್ಮ ಮನೆಯ ಖಾತೆಯನ್ನು ಮಾಡಿಸಿಕೊಡಲು ಕೋರಿದ್ದಾರೆ.

ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ತುಮಕೂರು ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕರ ಅಧೀಕ್ಷಕ (ಇನ್ನು ಮುಂದೆ "ತನಿಖಾಧಿಕಾರಿಗಳು" ಎಂದು ಕರೆಯಲ್ಪಡುತ್ತಾರೆ) ರವರಿಗೆ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ-

ದೂರುದಾರರು ಆರೋಪಿಸಿರುವ ಸದರಿ ಜಾಗವು ಗ್ರಾಮ ಠಾಣಾ ವ್ಯಾಪ್ತಿಗೆ ಬರುವುದಿಲ್ಲ ಹಾಗೂ ಖಾತಾ ಮಾಡಿಕೊಡಲು ಸಲ್ಲಿಸಿದ ಸ್ಥಳವು ಸರ್ವೆ ನಂಬರಿಗೆ ಬರುತ್ತಿದ್ದು, ಸರ್ವೆ ನಂಬರ್ ಆಸ್ತಿಯ ಖಾತೆಯನ್ನು ಬದಲಾವಣೆ ಮಾಡಲು ಬರುವುದಿಲ್ಲ. ಒಂದು ವೇಳೆ ಖಾತೆ ಮಾಡಲು ಬಯಸಿದ್ದಲ್ಲಿ, ಗ್ರಾಮ ಠಾಣಾ ವ್ಯಾಪ್ತಿಯಾದರೆ ಸಂಬಂಧಪಟ್ಟ ತಹಶೀಲ್ದಾರವರಿಂದ ಅನುಮೋದಿತ ಗ್ರಾಮ ಠಾಣಾ ನಕ್ಷೆಯನ್ನು ಪಡೆಯತಕ್ಕದ್ದು, ಭೂ ಪರಿವರ್ತನೆಯಾಗಿದ್ದರೆ ಅನುಮೋದಿತ ಭೂ ಪರಿವರ್ತನೆ ನಕ್ಷೆಯನ್ನು ಹೊಂದಿದ್ದಲ್ಲಿ ಮಾತ್ರ ಖಾತಾ ಬದಲಾವಣೆ

ಮಾಡಬಹುದಾಗಿದೆ. ಆದರೆ, ದೂರುದಾರರು ಸದರಿ ಜಮೀನಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಒದಗಿಸದೇ ಇರುವುದರಿಂದ, ಖಾತಾ ಬದಲಾವಣೆ ಮಾಡಲು ಸಾಧ್ಯವಾಗಿಲ್ಲ. ಸದರಿ ಜಮೀನಿಗೆ ಸಂಬಂಧಿಸಿದ ಖಾತೆಯನ್ನು ದೂರುದಾರರಿಗಾಗಲೀ ಅವರ ದೊಡ್ಡಪ್ಪ ಶ್ರೀ ಮುನಿರಾಮಯ್ಯರವರಿಗಾಗಲೀ ಹಾಗೂ ತಾಯಿ ಶ್ರೀಮತಿ ಶಾಂತಮ್ಮರವರಿಗಾಗಲೀ ಖಾತೆ ಮಾಡಿಕೊಟ್ಟಿಲ್ಲ. ಕೇವಲ ಕಂದಾಯ ಕಟ್ಟಿಸಿಕೊಳ್ಳುವ ದೃಷ್ಟಿಯಿಂದ ಡಿಮ್ಯಾಂಡ್ ವಹಿಯಲ್ಲಿ ನಮೂದು ಮಾಡಲಾಗಿದೆ. ಆ ದಾಖಲೆಯು ಯಾವುದೇ ರೀತಿಯ ಹಕ್ಕನ್ನು ದೃಢೀಕರಿಸುವುದಿಲ್ಲವೆಂದು ಹೇಳಿದ್ದಾರೆ.

ತನಿಖಾಧಿಕಾರಿಗಳ ವರದಿಗೆ ದೂರುದಾರರಿಂದ ಉತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಉತ್ತರದಲ್ಲಿ ವರದಿಯ ಅಂಶಗಳನ್ನು ಅಲ್ಲಗಳೆದು, ದೂರಿನ ಅಂಶಗಳನ್ನೇ ಪುನರುಚ್ಛಿಸಿದ್ದಾರೆ.

**ಕಡತ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ–**

ದೂರುದಾರರಿಗೆ ಸಂಬಂಧಿಸಿದ ಸರ್ವೆ ನಂ.19/4 ರ ಆಸ್ತಿಯು ಕಂದಾಯ ಭೂಮಿಯಾಗಿದ್ದು, ಸದರಿ ಜಮೀನಿಗೆ ಸಂಬಂಧಪಟ್ಟಂತೆ ಖಾತಾ ಬದಲಾವಣೆ ಮಾಡಿಕೊಡುವಂತೆ ದೂರುದಾರರು ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಖಾತಾ ಬದಲಾವಣೆ ಮಾಡದೇ ಕಂದಾಯ ವಸೂಲಿಗಾಗಿ ಡಿಮ್ಯಾಂಡ್ ವಹಿಯಲ್ಲಿ ದೂರುದಾರರ ತಾಯಿಯ ಹೆಸರನ್ನು ನಮೂದಿಸಿದ್ದಾರೆ. ಆದರೆ, ಸದರಿ ಜಮೀನು ಕಂದಾಯ ಇಲಾಖೆಗೆ ಸಂಬಂಧಿಸಿದ ಜಮೀನಾಗಿದ್ದು, ಯಾವುದೇ ಕಂದಾಯ ಇಲಾಖೆಯ ಜಮೀನನ್ನು ಪಂಚಾಯತ್‌ನಲ್ಲಿ ಖಾತಾ ಬದಲಾವಣೆ ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದು, ಆದರೆ ಕಂದಾಯ ವಸೂಲಿಗಾಗಿ ಸದರಿ ಜಮೀನಿನ ಬಗ್ಗೆ ತಮ್ಮ ಪಂಚಾಯತ್‌ನಲ್ಲಿ ದೂರುದಾರರ ತಾಯಿಯ ಹೆಸರಿಗೆ ಡಿಮ್ಯಾಂಡ್ ವಹಿಯನ್ನು ತಯಾರಿಸಿರುವುದು ಕಂಡು ಬಂದಿದೆ. ಸದರಿ ಸ್ವತ್ತು 1962 ನೇ ಸಾಲಿನಲ್ಲಿ ಪಾಲುದಾರಿಕೆಯ ಮೂಲಕ ಬಂದಿದೆ. ಆದರೆ, ಈ ಬಗ್ಗೆ ಪಾಲುಪಾರಿಕತ್ತು ಪಟ್ಟಿಯನ್ನು ಹಾಜರುಪಡಿಸುವ ಅಂಶವನ್ನು ಒಪ್ಪಿದ್ದಾರೆ. ಆ ನಂತರ ದೂರುದಾರರ ತಾಯಿ ಅದೇ ರೀತಿ ದೂರುದಾರರ ದೊಡ್ಡಪ್ಪ ಶ್ರೀ ಮುನಿರಾಮಯ್ಯ ರವರವ ಹೆಸರಿಗೆ ಸದರಿ ಸ್ವತ್ತನ್ನು ಡಿಮ್ಯಾಂಡ್ ವಹಿಯಲ್ಲಿ ನಮೂದಿಸಿದ್ದಾರೆ. ಸರ್ಕಾರಿ ಸುತ್ತೋಲೆ ಸಂ:ಗ್ರಾಅಪ 553 ಗ್ರಾಪಂಅ 2012, ದಿ:04–01–2013 ರಲ್ಲಿ ಯಾವುದೇ ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸದರಿ ಸ್ವತ್ತನ್ನು ಕಂದಾಯ ವ್ಯಾಪ್ತಿಗೆ ಬರುವ ತಹಶೀಲ್ದಾರ್‌ರವರಿಂದ ವರದಿ ಪಡೆದು ಈ ಬಗ್ಗೆ ಆ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿ, ಅಂತೀಮವಾಗಿ ತೆರಿಗೆ ಬೆಡಿಕೆಯನ್ನು ನಿರ್ಧರಿಸುವ ಉದ್ದೇಶದಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ಕಲಂ 199ರನ್ವಯ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ, ತೆರಿಗೆ ನಿರ್ಧರಿಸುವ ಪಟ್ಟಿಯನ್ನು ತಯಾರಿಸುವ ಅಧಿಕಾರ ಇದೆ ಮತ್ತು ನಿಯಮ 30ರನ್ವಯ ತೆರಿಗೆ ಬೇಡಿಕೆ ಮತ್ತು ವಸೂಲಿ ವಹಿಯನ್ನು ಸಿದ್ದಗೊಳಿಸಬೇಕೆಂದು ತಿಳಿಸಿದ್ದು, ಅವುಗಳನ್ನು ನಿರ್ವಹಿಸುವ ಅಧಿಕಾರ ಪಂಚಾಯತ್‌ಗೆ ಇರುತ್ತದೆ. ಆದರೆ, ಎದುರುದಾರರು ದೂರುದಾರರ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಸ್ವತ್ತು ಸರ್ವೆ ನಂಬರಿನಲ್ಲಿದ್ದು, ಸಂಬಂಧಪಟ್ಟ ತಹಶೀಲ್ದಾರವರಿಂದ ವರದಿ ಪಡೆದಿರುವ ಬಗ್ಗೆ ಮತ್ತು ಆ ಸ್ಥಳದ ನಕ್ಷೆ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ ಮತ್ತು ಸದರಿ ಸ್ವತ್ತು ಭೂ ಪರಿವರ್ತನೆಯಾಗಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಜಮೀನಿಗೆ ಸಂಬಂದಪಟ್ಟಂತೆ ಪಾಲುಪಾರಿಕತ್ತು ಅಥವಾ ಹಕ್ಕು ಪತ್ರವನ್ನು ಪಡೆಯದೇ ಏಕಾಏಕಿ ದೂರುದಾರರ ತಾಯಿಯ ಹೆಸರಿಗೆ ಡಿಮ್ಯಾಂಡ್ ವಹಿಯ ಉದ್ಯತ ಭಾಗವನ್ನು ತಯಾರಿಸಿರುವುದು ಸರ್ಕಾರದ ಸುತ್ತೋಲೆಗೆ ವಿರುದ್ಧವಾಗಿದೆ. ಸರ್ಕಾರದ ಸುತ್ತೋಲೆಯಂತೆ ಯಾವುದೇ ಕಂದಾಯ ಇಲಾಖೆಯ ವ್ಯಾಪ್ತಿಗೊಳಪಟ್ಟ ಜಮೀನು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವಂತಿದ್ದರೆ, ಸದರಿ ಜಮೀನಿಗೆ ಸಂಬಂಧಿಸಿದಂತೆ ತೆರಿಗೆ ವಿಧಿಸುವ ಅಧಿಕಾರ ಆಯಾಯ ಗ್ರಾಮ ಪಂಚಾಯತ್‌ಗೆ ಇದೆ. ಆದರೆ, ಈ ಬಗ್ಗೆ ಸದರಿ ಸ್ವತ್ತು ಗ್ರಾಮ ಠಾಣಾ ವ್ಯಾಪ್ತಿಗೆ ಇದೆಯೆಂದು ಸ್ಥಳ ತನಿಖೆ ನಡೆಸಿ, ತಹಶೀಲ್ದಾರ್‌ರವರಿಂದ ವರದಿ ಮತ್ತು ಕಚ್ಚಾ ನಕ್ಷೆ ಪಡೆದು ಈ ಬಗ್ಗೆ ದಾಖಲೆಗಳನ್ನು ತಮ್ಮ ಪಂಚಾಯತ್‌ನಲ್ಲಿ ಕಾಯ್ದುಕೊಳ್ಳುವ ಬಗ್ಗೆ ಅಧಿಕಾರ ಇದೆ. ಆದರೆ, ಎದುರುದಾರರು ದೂರುದಾರರ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ತಯಾರಿಸುವ ಸಂದರ್ಭದಲ್ಲಿ ಸರ್ಕಾರದ ಸುತ್ತೋಲೆಯಲ್ಲಿ ಹೇಳಲಾದ ಅಂಶಗಳನ್ನು ಸರಿಯಾದ ರೀತಿ ಪಾಲಿಸದೇ ಕರ್ತವ್ಯಲೋಪ ಎಸಗಿದ್ದಾರೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳು, ತನಿಖಾಧಿಕಾರಿಗಳ ವರದಿ ಹಾಗೂ ಎದುರುದಾರರ ಆಕ್ಷೇಪಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡುವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮಲ್ಲಿಕಾರ್ಜುನ ಆರಾಧ್ಯ, ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಮ್ಮಸಂದ್ರ ಗ್ರಾಮ ಪಂಚಾಯತ್, ದಂಡಿನಶಿವಿರ ಹೋಬಳಿ, ತುರುವೇಕೆರೆ

ತಾಲ್ಲೂಕ್ ತುಮಕೂರು ಜಿಲ್ಲೆ ಇವರು ದಿನಾಂಕ: 30-11-2015 ರಂದು ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ 3(1) ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i) ರ ಅಡಿಯಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರು-2 ರವರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i) ರನ್ವಯ ವಿಚಾರಣೆಯನ್ನು ನಡೆಸಲು 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು-2 ಇವರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/383/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 17-05-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮಲ್ಲಿಕಾರ್ಜುನ ಆರಾಧ್ಯ, ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಮ್ಮಸಂದ್ರ ಗ್ರಾಮ ಪಂಚಾಯತ್, ದಂಡಿನಶಿವಿರ ಹೋಬಳಿ, ತುರುವೇಕೆರೆ ತಾಲ್ಲೂಕ್ ತುಮಕೂರು ಜಿಲ್ಲೆ ಇವರು ದಿನಾಂಕ: 30-11-2015 ರಂದು ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ 3(1) ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i) ರ ಅಡಿಯಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8 ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 117 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುರುವೇಕೆರೆ ತಾಲ್ಲೂಕ್ ತುಮಕೂರು ಜಿಲ್ಲೆ.
6) ಶ್ರೀ ಮಲ್ಲಿಕಾರ್ಜುನ ಆರಾಧ್ಯ, ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಮ್ಮಸಂದ್ರ ಗ್ರಾಮ ಪಂಚಾಯತ್, ದಂಡಿನಶಿವಿರ ಹೋಬಳಿ, ತುರುವೇಕೆರೆ ತಾಲ್ಲೂಕ್ ತುಮಕೂರು ಜಿಲ್ಲೆ.
7) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.